ಅಸಲು ದಾವಾ.ನಂ. 45/2018
ಡಿ ಡಬ್ಲ್ಯೂ-3

ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ ಶ್ರೀ ಕೆಡಿಟಿ ವಕೀಲರಿಂದ:</u>

ದಾವಾ ಆಸ್ತಿ ಸಿಟಿಎಸ್ ನಂ.443 ಎಂದರೆ ಸರಿ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಆಸ್ತಿ ಸಿಟಿಎಸ್ ನಂ.441 ಸಹ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಎರಡೂ ಆಸ್ತಿಗಳು ವಿಸ್ತೀರ್ಣ ಹಾಗೂ ಒಂದಕ್ಕೊಂದು ಹೊಂದಿಕೊಂಡಿವೆ ಎಂದರೆ ಸರಿ. ಬಸವ್ವ ಮತ್ತು ಬಸಪ್ಪ ಇವರಿಗೆ ಪವಾಡೆಪ್ಪ ಮತ್ತು ನಾಗಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ಆಸ್ತಿ ಸಿಟಿಎಸ್ ನಂ.441 ನೇದ್ದನ್ನು ಪವಾಡೆಪ್ಪ ಇವರು ತನ್ನ ಅರ್ಧ ಹಿಸ್ಸೆಯನ್ನು 1972 ರಲ್ಲಿ ಪಸಪತ್ತೆಪ್ಪ ಪಾವಟೆ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಉಳಿದ ಅರ್ಧ ಹಿಸ್ಸೆ ವಾದಿಯರ ತಂದೆ ನಾಗಪ್ಪನಿಗೆ ಉಳಿದಿರುತ್ತದೆ. ಅದರ ಸಿಟಿಎಸ್ ನಂ.443 ಅಂತಾ ಇರುತ್ತದೆ. ಪವಾಡೆಪ್ಪ ತನ್ನ ಪಾಲಿನ ಆಸ್ತಿ ಮಾರಾಟ ಮಾಡಿರುವುದರಿಂದ ಅವರಿಗೆ ಯಾವುದೇ ಹಕ್ಕು ಉಳಿದಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆ ಬಸಪ್ಪ ಇವರು ನಾಗಪ್ಪ ಹತಪಕ್ಕಿ ಇವರ ಮಗ. ಪವಾಡೆಪ್ಪ ಇವರು ತನ್ನ ಆಸ್ತಿ ಮಾರಾಟ ಮಾಡಿದ್ದರೂ ಸಹ ಖೊಟ್ಟಿಯಾಗಿ ಮೃತ್ಯು ಪತ್ರ ಮಾಡಿರುತ್ತಾರೆ. ಆಸ್ತಿ ನಂ.443 ಈಗ ಬಸಪ್ಪ ಹತಪಕ್ಕಿ ಇವರ ಹೆಸರಿನಲ್ಲಿ ಇರುತ್ತದೆ. ನಂತರ ತನ್ನ 6 ಜನ ಮಕ್ಕಳ ಹೆಸರಿನಲ್ಲಿ ವರ್ಗಾವಣೆ ಮಾಡಿರುತ್ತಾರೆ.

<u>ಪಾಟೀ ಸವಾಲು: **1** ನೇ ಪ್ರತಿವಾದಿ ಪರ ಶ್ರೀ ಎಸ್.ವಿ.ಜಿ. ವಕೀಲರಿಂದ:</u>

ನಾನು 2 ನೇ ತರಗತಿವರೆಗೆ ಅಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮಾತ್ರ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಆಸ್ತಿ ಮೂಲತಃ, ನಮ್ಮ ಮೂಲ ಪುರುಷ ಬಸವ್ವ ಬಸಪ್ಪ ಹತಪಕ್ಕಿ ಇವರಿಗೆ ಸೇರಿದ್ದು. ಸದರಿಯವರ ಹೆಸರಿನಲ್ಲಿ ಒಟ್ಟು ಮೂರು ಆಸ್ತಿಗಳು ಇದ್ದವು. ಅವುಗಳ ನಂಬರ ಗೊತ್ತಿಲ್ಲ. ಒಂದು ಆಸ್ತಿಯ ಮೇಲೆ ಈ ದಾವೆ ಸಲ್ಲಿಸಿರುತ್ತೇವೆ, ಇನ್ನೆರಡು ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿ ಹಾಜಪರಸಿಡಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿ ನನ್ನ ಸಹೋದರನ ಮಗ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆಸ್ತಿ ಸಿಟಿಎಸ್ ನಂ.443 ನಮ್ಮ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ.

ವಾದ ಪತ್ರದಲ್ಲಿ ಹೇಳಿದ ವಂಶಾವಳಿಯನ್ನು ನಾನು ನೋಡಿಲ್ಲ. ನಮ್ಮ ಮೂಲ ಪುರುಷ ಬಸಪ್ಪ ಅವರ ಹೆಂಡತಿ ಬಸವ್ವ ಎಂದರೆ ಸರಿ. ಸದರಿ ಬಸಪ್ಪ ಮತ್ತು ಬಸವ್ವ ಇವರಿಗೆ ಇಬ್ಬರು ಮಕ್ಕಳು, ಅವರೆಂದರೆ ಪವಾಡೆಪ್ಪ ಮತ್ತು ನಾಗಪ್ಪ ಎಂದರೆ ಸರಿ. ಪವಾಡೆಪ್ಪನ ಹೆಂಡತಿಯ ಹೆಸರು ರುದ್ರವ್ವ ಎಂದರೆ ಸರಿ. ಸದರಿ ರುದ್ರವ್ವ ಮೃತಪಟ್ಟಿರುತ್ತಾರೆ. ಸದರಿ ಪವಾಡೆಪ್ಪ ಮತ್ತು ರುದ್ರವ್ವ ಇವರಿಗೆ ಒಟ್ಟು 7 ಜನ ಮಕ್ಕಳು ಎಂದರೆ ಸರಿ, ಅವರೆಂದರೆ ಉಮಾಕಾಂತ, ಮಾಹದೇವ, ಸುರೇಶ, ಗೋದವ್ವ, ಗೌರವ್ವ, ದಾನಮ್ಮ, ಪ್ರೇಮಾ ಎಂದರೆ ಸರಿ, ಸದರಿಯವರನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾಗಪ್ಪನ ಹೆಂಡತಿಯ ಹೆಸರು ರೇವಕ್ಕ ಎಂದರೆ ಸರಿ, ಅವರಿಗೆ ಒಟ್ಟು 10 ಜನ ಮಕ್ಕಳು ಎಂದರೆ ಸರಿ, ಅವರೆಂದರೆ, 1 ನೇ ವಾದಿ, ನಾನು, ಮಲ್ಲಪ್ಪ, ದುಂಡಪ್ಪ, ವಿಜಯಪ್ರಕಾಶ, ಮಹಾನಂದಾ, ಸದವ್ವ, ಮಲ್ಲವ್ವ ಮತ್ತು ಅನ್ನಪೂರ್ಣ ಇದ್ದು, ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಸಿಟಿಎಸ್ ನಂ.441 ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅದನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಪಶುಪತಿ ಪಾವಟೆ ಇವರನ್ನು ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ. ಪವಾಡೆಪ್ಪ ಇವರು ಆಸ್ತಿ ನಂ.441 ನ್ನು ಮಾರಾಟ ಮಾಡಿದಾಗ ನಾವು ಅದಕ್ಕೆ ತಕರಾರು ಮಾಡಿಲ್ಲ. ಆಸ್ತಿ ನಂ.441 ವಾಟ್ನಿಯ ಪ್ರಕಾರ ನನ್ನ ತಂದೆ ನಾಗಪ್ಪ ಇವರಿಗೆ ಬರಬೇಕು. ಪವಾಡೆಪ್ಪ ಇವರು ದಿನಾಂಕಃ 19-05-2003 ರಂದು ಆಸ್ತಿ ನಂ.443, 1 ನೇ ಪ್ರತಿವಾದಿಯ ತಂದೆ ಬಸಪ್ಪ ಇವರಿಗೆ ಮೃತ್ಯುಪತ್ರ ಬರೆದಕೊಟ್ಟಿರುತ್ತಾನೆ ಎಂದರೆ ಸರಿ. ಮೃತ್ಯು ಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರು ದಾಖಲೆಗಳಲ್ಲಿ ಸೇರಿರುತ್ತದೆ ಎಂದರೆ ಸಾಕ್ಷಿ ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಾವು ಸದರಿ ಮೃತ್ಯು ಪತ್ರವನ್ನು ಇಲ್ಲಿಯವರೆಗೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ವಿಲ್ ಪತ್ರ ನನ್ನ ಮತ್ತು ವಾದಿಯರ ಮೇಲೆ ಬಂಧನಕಾರಕ ಇರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಕಾನೂನು ಪ್ರಕಾರ ಆಸ್ತಿ ನಂ.443 ನೇದ್ದರಲ್ಲಿ ತನ್ನ ಹೆಸರು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಬಸಪ್ಪ ಮೃತಪಟ್ಟ ನಂತರ ಅವರ ಮಕ್ಕಳು ಸದರಿ ಆಸ್ತಿಯನ್ನು ವಾರಸಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ವಾರಸಾ ಆದ ಕುರಿತು ನಾವು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ ಕಂಡಿಕೆ 7 ರ ಪ್ರಕಾರ ನನ್ನ ತಂದೆ-ತಾಯಿಗೆ 6 ಜನ ಮಕ್ಕಳು ಎಂದು ಹೇಳಿರುವುದು ನಿಜ ಇರುತ್ತದೆ. ಈ ಪ್ರಕರಣದ ದಾವಾ ಆಸ್ತಿಯ ಕುರಿತು, ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂ.71/2009 ರಂತೆ ಪಾಲು ವಿಭಾಗ ಕೋರಿ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿ ಒಟ್ಟು 7 ಜನ ವಾದಿಯರು ಮತ್ತು 9 ಜನ ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 2 ನೇ ವಾದಿ ಎಂದರೆ ಸರಿ. ನಿಡಿ-1 ರ ಪ್ರಕಾರ, ಪವಾಡೆಪ್ಪ ಇವರು ಬರೆದುಕೊಟ್ಟ ವಿಲ್ ಪ್ರಶ್ನೆ ಮಾಡಿದ್ದೆವು ಎಂದರೆ ಸರಿ. ಸದರಿ ದಾವೆ ಸಲ್ಲಿಸಿದ 17 ವರ್ಷಗಳ ನಂತರ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಪವಾಡೆಪ್ಪ ಬರೆದುಕೊಟ್ಟ ಮೃತ್ಯು ಪತ್ರ ಕಾಲಪರಿಮಿತಿ ಅಡಿಯಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಮೃತ್ಯು ಪತ್ರ ಖೊಟ್ಟಿಯಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ 2 ನೇ ವಾದಿ, ಮೂಲ ದಾವೆ ಸಂ.71/2009 ರಲ್ಲಿ 5 ನೇ ಪ್ರತಿವಾದಿ ಇದ್ದ ಎಂದರೆ ಸರಿ. ಸದರಿ ದಾವೆಯನ್ನು 1 ನೇ ಪ್ರತಿವಾದಿಯ ತಂದೆ ಬಸಪ್ಪ ಮತ್ತು ಇತರರ ವಿರುದ್ಧ ಸಲ್ಲಿಸಿದ್ದೆವು ಎಂದರೆ ಸರಿ. ಮೂಲ ದಾವೆ ಸಂ.71/2009 ರಲ್ಲಿ ಸಿಟಿಎಸ್ ನಂ.443, 1182, 1170, 1177 ಮತ್ತು 1178 ತೋರಿಸಿದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿ ಒಂದು ವಾರ್ಪಿಂಗ್ ಮಶೀನ್ ಮತ್ತು ಸೈಜಿಂಗ ಯುನಿಟ್ ದಾವಾ ಆಸ್ತಿಗಳು ಇದ್ದವು ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ.

ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ಅದರ ಚಕಬಂದಿ ಹೇಳಲು ಬರುವುದಿಲ್ಲ. ಮೂ ದಾವೆ ಸಂ.71/2009 ನ್ನು ಶ್ರೀ ಕೆಡಿಟಿ ವಕೀಲರು ಸಲ್ಲಿಸಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆ ಬಸಪ್ಪ ಇವರ ಪರವಾಗಿ ಶ್ರೀ ಎಂಜಿಕೆ ವಕೀಲರು ಹಾಜರಾಗಿದ್ದರು ಎಂದರೆ ಸರಿ. ನಾನು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆಗಳನ್ನು ಸಲ್ಲಿಸುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ಮೂಲ ದಾವೆ ಸಂ.71/2009 ನ್ನು ದಿನಾಂಕಃ 26-05-2012 ರಂದು ಲೋಕ ಅದಲಾತನಲ್ಲಿ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.02.21 17:39:42 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ